ವ್ಯವಸ್ಥಾ ಮಾಡದು ಬ್ಯಾಡ. ಎಲ್ಲ ಬೆಂಗಳೂರಿನಿಂದ ತರುತಾರ' ಅಂದು ತಾತ ವೀರನಗೌಡನ ಫೋಟೊಕ್ಕ ಕೈಮುಗಿದು 'ಎಲ್ಲಾ ದೈವಿಚ್ಛೆ... ಕೆಂಚ ನನ್ನ ಜತಿಗೆ ಮಕ್ಕಾ ಬಾ...' ಎಂದು ತಮ್ಮ ಕೊಠಡಿಗೆ ಹೋದರು.



★★★

ಇನ್ನೂ ಸೂರ್ಯ ಮೂಡಿರಲಿಲ್ಲ, ಮಗ ಪುರುಷೋತ್ತಮ ಬಂದ. ಎಂಟತ್ತು ಟಾಟಾ ಸುಮೋ, ಒಂದು ದೊಡ್ಡ ಬಸ್ಸು, ನಾಲ್ಕು ಸ್ಕಾರ್ಪಿಯೋ ಜತಿಗೆ ಬಂದವು. ಒಂದು ಇನ್ನೋವ ಕಾರು ಬಂತು. ಅದರಲ್ಲಿ ಆರು ಬೆಳ್ಳನ ಹುಡುಗಿಯರು ಇಳಿದರು. ತಳ ತಳ ಹೊಳಿಯೋ ಕಣ್ಣು ಕುಕ್ಕುವಂತ ಹುಡಿಗಿಯರು. ಎಲ್ಲಾ ಸೇರಿ ಇಪ್ಪತ್ತೈದು ಮೂವತ್ತು ಜನ. ಒಬ್ಬರಿಗಿಂತ ಒಬ್ಬರು ಮಿಮಿರ ಮಿರುಗುತ್ತಿದ್ದರು. ಇವರನೆಲ್ಲ ನೋಡಿ ಗೌಡ್ರಿಗೆ ಗಾಬರಿಯಾಯಿತು. ಇದನ್ನು ಗಮನಿಸಿದ ಪುರುಷೋತ್ತಮ 'ಅಪ್ಪಾ... ಇವರೆಲ್ಲಾ ಪ್ರಚಾರಕ್ಕ ಬಂದಾರ. ನಾವೆಲ್ಲಾ ಒಳ್ಳೇ ಸ್ಕೆಚ್ ಹಾಕಿ ಬಂದೀವಿ. ನೀವು ಯಾವುದಕ್ಕೂ ತೆಲಿ ಕೆಡಿಸಿಕೊಳ್ಳೋದು ಬ್ಯಾಡ. ನಮಗ ನಿನ್ನ ಕೆಂಚನ್ನೊಂದು ಕೊಟ್ಟರ ಸಾಕು. ನಮಗ ಊಟ ತಿಂಡಿ ಸ್ನಾನ ಎಲ್ಲಾ ಆ ಬಸ್ಸಿನ್ಯಾಗ ವ್ಯವಸ್ಥಾ ಐತಿ. ಎಂಟು ಗಂಟೆಯಿಂದಲೇ ಪ್ರಚಾರ ಸುರು ಮಾಡ್ತೀವಿ. ಎಲ್ಲಾ ಮುಖಂಡರಿಗೆ ಹೇಳಿ ಆಗಿದೆ. ಅವರು ಸಮಯಕ್ಕ ಸರಿಯಾಗಿ ಬರ್ತಾರ. ಯಾರು ಯಾರನ್ನ ಕಾಯಂಗಿಲ್ಲ. ಎಲ್ಲಾ ಒಂದು ತಿಂಗಳಿಂದಲೇ ಯೋಜನೆ ರೂಪಿಸಿದಿವಿ' ಎಂದ. ಕೆಂಚನನ್ನು ಬಸ್ಸಿನೊಳಗೆ ಕರೆದುಕೊಂಡು ಬಂದರು. ಅವನಿಗೆ ಬಸ್ಸು ನೋಡಿ ಗಾಬರಿಯಾಯಿತು. ಅದು ಅರಮನೆ ಇದ್ದಂಗಿತ್ತು. ಅವನನ್ನು ಒಂದೆಡೆ ಕೂಡಿಸಿ ತಲೆ ಕೂದಲು ಕತ್ತರಿಸಿದರು. ಮೈಯೆಲ್ಲ ಮಸಾಜು ಮಾಡಿ ಬಿಸಿ ನೀರಿನ ಉಗಿಯಲ್ಲಿ ಕೂಡಿಸಿದರು. 'ಕೆಂಚಣ್ಣ ನಿನ್ನ ಅಭಿವೃದ್ಧಿ ಮಾಡ್ತೀವಿ. ನೀನು ಬಾಳ ಚೆಂದ ಕಾಣಬೇಕು' ಎಂದು ಬಳಿ ಬಟ್ಟೆ ತೊಡಿಸಿದರು. ಕನ್ನಡಿಯಲ್ಲಿ ತೋರಿಸಿದರು. ಅವನನ್ನೇ ಅವನು ನಂಬದಾದ. ಪುರುಷೋತ್ತಮ ಬಂದು ಅಪ್ಪಿಕೊಂಡು 'ಕೆಂಚಪ್ಪ ನಿನ್ನಿಂದ ನಾನು ಗೆಲ್ಲಬೇಕು. ನಮ್ಮನಿಗಿ ಬೇಕಾದಷ್ಟು ದುಡುದಿದ್ದಿ. ಇನ್ನೂ ನೀವು ಇಲ್ಲಿ ಇರೋದು ಸಾಕು. ನಾ ಗೆದ್ದ ಮ್ಯಾಲ ಅಪ್ಪ ನೀನು ಅಮೆರಿಕದಾಗ ಇದ್ದು ಬುಡುವಂತಿರಿ. ಇನ್ನೂ ಈ ಸುಡುಗಾಡು ಮನ್ಯಾಗ ಯಾಕ ಇರುತೀರಿ' ಎಂದ. ಕೆಂಚನಿಗೆ ಏನು ಮಾತಾಡಬೇಕು ತಿಳಿಲಿಲ್ಲ. 'ಯಪ್ಪೋ... ಅದೆಲ್ಲಾ ನಮಗ ಏನು ತಿಳಿತದಪ. ನಿಮ್ಮನಿ ಅನ್ನ ತಿಂದೀನಿ. ನೀವು ಬೇಸಿದ್ರ ಸಾಕು' ಎಂದು ಮುದುರಿ ಕುಂತ.

ಸೂಗುನಗೌಡ, ವೀರನಗೌಡ, ಮಲ್ಲನಗೌಡ, ನಿಂಗನಗೌಡ ಎಲ್ಲಾ ಬಂದರು. 'ಶಾಂತಗೌಡ ಬಾರಪ. ನೋಡು ಕೆಂಚ ಮದುಮಗ ಆದಂಗ ಆಗ್ಯಾನ. ನಮ್ಮ ಪುರುಷೋತ್ತಮ ಇಡೀ ಕ್ಷೇತ್ರದ ಜನರನ್ನ ಕೆಂಚನ್ನ ಮಾಡಿದಂಗ ಮಾಡ್ತಾನ. ಒಳ್ಳೇ ಸ್ಮಾರ್ಟ್ ಆ್ಯಂಡ್ ಬ್ಯೂಟಿಫುಲ್' ಎಂದು ನಗಾಡಿದರು. ಶಾಂತಗೌಡ ಹೊರಗ ಬಂದರು. ನಮ್ಮ ಕೆಂಚ ಎಲ್ಯಾನ ಎಂದು ಹುಡುಕಿದರು. ಕೆಂಚ ಓಡಿ ಬಂದು 'ಯಪ್ಪೋ ನನ್ನ ಗೊತ್ತು ಸಿಗವಲ್ತನು. ಇವರೆಲ್ಲ ನನ್ನ ಹೀಂಗ ಮಾಡ್ಯಾರಪ' ಎಂದು ಕಾಲು ಮುಗಿದ. 'ಇದೇನಲೇ ನಿನ್ನ ಅವತಾರ. ನನಗ ನನ್ನ ಕೆಂಚ ಬೇಕಲೇ.' ಎಂದು ಬಿಗಿದಪ್ಪಿ ಕಣ್ಣೀರುಗರೆದರು. ಅಪ್ಪನನ್ನು ನೋಡಿ ಪುರುಷೋತ್ತಮನಿಗೆ ಸಿಟ್ಟು ಬಂತು. 'ಅಪ್ಪಾ...